ಈ) ಈ ರಸ್ತೆಗಳ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಯಾದಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಮುಸ್ತೂರಿನಿಂದ ಅಫಜಲ್‌ಪುರ ರಸ್ತೆಯು ನಬಾರ್ಡ್ ಯೋಜನೆಯಡಿ ಮಂಜೂರಾಗಿದೆ. ಫಸ್‌ಪೂಲ್‌ನಿಂದ ಮುದ್ನಾಳ್ - ಕಂದಕೂರ್ ರಸ್ತೆಯನ್ನು ನಬಾರ್ಡ್ ಯೋಜನೆಯಡಿ ಕೈಗೊಂಡಿರುವುದಿಲ್ಲ.

ಆ) ಮುಸ್ತೂರ್‌ನಿಂದ ಅಫಜಲ್‌ಪುರ ರಸ್ತೆಯು ಅಕ್ಟೋಬರ್ ತಿಂಗಳು 1997 ರಲ್ಲಿ ಆಡಳಿತಾತ್ಮಕ ಮಂಜೂರಾತಿ ಆಗಿದೆ. ಹಾಗೂ ಈ ಕಾಮಗಾರಿಯನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಇವರಿಗೆ ವಹಿಸಿಕೊಡಲಾಗಿದ್ದು ಕಾಮಗಾರಿಯು ಪ್ರಾರಂಭವಾಗಿದೆ.

ಇ) ಮುಸ್ತೂರ್‌ನಿಂದ ಅಫಜಲ್‌ಪುರ ರಸ್ತೆಯ ನಿರ್ಮಾಣಕ್ಕೆ 205 ಲಕ್ಷ ರೂ.ಗಳ ಅಂದಾಜು ವೆಚ್ಚವಾಗಲಿದೆ. ಹಾಗೂ ಕಾಮಗಾರಿಯು ಇದೀಗ ಪ್ರಾರಂಭವಾಗಿರುವುದರಿಂದ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಈ) ಮುಸ್ತೂರ್‌ನಿಂದ ಅಫಜಲ್‌ಪೂರ್ ರಸ್ತೆ ಕಾಮಗಾರಿಯನ್ನು ಯೋಜನೆಯಿಂದ 3:09 ರ ವೇಳೆಗೆ ಪೂರೈಸಲು ಪ್ರಸ್ತಾವಿಸಿದೆ.

ಜಿಲ್ಲಾ ಪಂಚಾಯಿತಿ ರಸ್ತೆಗಳ ನಿರ್ವಹಣೆ

196 (498) ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) ಮತ್ತು ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್‌ರವರು ನಿರ್ಮಾಣ ಮಾಡಿದ ದೂರವೆಷ್ಟು?

ಆ) ಈ ರೀತಿ ನಿರ್ಮಾಣ ಮಾಡಿದ ರಸ್ತೆಗಳು ನೋಟಿಫೈಡ್ ಮಾಡಲಾಗಿದೆಯೇ? ಅಂದರೆ ಲೋಕೋಪಯೋಗಿ ಇಲಾಖೆಯವರ ಅಧಿಕೃತ ನೊಂದಣಿ ರಿಜಿಸ್ಟರ್‌ನಲ್ಲಿ ಆ ರಸ್ತೆಗಳನ್ನು ನಮೂದು ಮಾಡಲಾಗಿದೆಯೇ?

ಇ) ಈ ರೀತಿ ಲೋಕೋಪಯೋಗಿ ಇಲಾಖೆಯ ಅಧಿಕೃತ ನೊಂದಣಿ ರಿಜಿಸ್ಟರ್‌ನಲ್ಲಿ ನೋಂದಣಿ ಮಾಡಿದ್ದು, ಎಷ್ಟು ಕಿ.ಮೀ ರಸ್ತೆಗಳನ್ನು ನೊಂದಣಿ ಮಾಡಲಾಗಿದೆ: ಮಾಡಿದ್ದರೆ ಅವುಗಳ ನಿರ್ವಹಣೆಗೆ ಪ್ರತಿ ಕಿ.ಮೀಗೆ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ. ನಿಗಧಿಪಡಿಸಿದ್ದಲ್ಲಿ ಆ ಪ್ರಕಾರ ಹಣ ಪ್ರತಿ ವರ್ಷ ಒದಗಿಸಲಾಗಿದೆಯೇ? ಜಿಲ್ಲಾವಾರು ವಿವರಗಳನ್ನು ನೀಡುವುದು.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 71, 115 ಕಿ.ಮೀ. ಉದ್ದ ರಸ್ತೆ ಇದ್ದು ಈ ಪೈಕಿ ಹೊಸದಾಗಿ ಸೇರಿದ ರಸ್ತೆಗಳ ಉದ್ದ 986 ಕಿ.ಮೀ ಇವುಗಳ ಜಿಲ್ಲಾವಾರು ವಿವರ ನಮೂನೆ 1ರಲ್ಲಿ ಕೊಡಲಾಗಿದೆ.

ಆ) ಮೇಲಿನ ನಿರ್ಮಾಣಗೊಂಡ ರಸ್ತೆಗಳ ಉದ್ದವು ಲೋಕೋಪಯೋಗಿ ಇಲಾಖೆಯ ಅಂಕಿ ಅಂಶಗಳ ವಾರ್ಷಿಕ ವರದಿಗಳಲ್ಲಿ ಸೇರಿಸಲಾಗಿದ್ದು ಈ ಉದ್ದವನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳೆಂದು ಪ್ರತ್ಯೇಕವಾಗಿ ನೊಂದಾಯಿಸಲಾಗಿದೆ. ಅಂದರೆ ರಸ್ತೆಗಳ ಅಂಕಿ ಅಂಶಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

ಇ) ಲೋಕೋಪಯೋಗಿ ಇಲಾಖೆಯ ಅಂಕಿ ಅಂಶಗಳ ವರದಿಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸುಮಾರು 71,115 ಕಿ.ಮೀ. ಉದ್ದ ರಸ್ತೆಯನ್ನು ಅಂಕಿ ಅಂಶಗಳ ಪಟ್ಟಿಯಲ್ಲಿ ನೊಂದಾಯಿಸಿ ಈ ರಸ್ತೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವುದೆಂದು ಸೂಚಿಸಲಾಗಿದೆ. ಈ ಪೈಕಿ ಇತರೆ ಜಿಲ್ಲಾ ರಸ್ತೆಗಳು 1644 ಕಿ.ಮೀ. ಹಳ್ಳಿ ರಸ್ತೆಗಳು 39451 ಕಿ.ಮೀ ಹಾಗೂ ಟಿಡಿಬಿ ರಸ್ತೆಗಳು 30020 ಕಿ.ಮೀ. ಗಳಾಗಿರುತ್ತವೆ. ಪ್ರತಿ ಕಿ.ಮೀ (ಉದ್ದ ರಸ್ತೆ ಅಂದರೆ ಇತರೆ ಜಿಲ್ಲಾ ರಸ್ತೆಗಳು ಹಾಗೂ ಗ್ರಾಮೀಣ ರಸ್ತೆಗಳಿಗೆ) 10380 ರೂ.ಗಳ ಅನುದಾನವು ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳಿಗೆ ಲಭ್ಯವಿರುತ್ತದೆ ಹಾಗೂ ಪ್ರತಿ ವರ್ಷವೂ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳಿಗೆ ಅನುದಾನವು ನೀಡಲಾಗಿದೆ.

ಎಲ್. ಎ. ಪ್ರಶ್ನೆ ಸಂಖ್ಯೆ 488 ಕ್ಕೆ ಉತ್ತರ

ನಮೂನೆ - 1

ಕರ್ನಾಟಕ ರಾಜ್ಯದ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುವ ಒಟ್ಟು ರಸ್ತೆಯ ಉದ್ದ ಹಾಗೂ 1996-97 ನೇಸಾಲಿನಲ್ಲಿ ಹೊಸದಾಗಿ ಸೇರಿಕೊಂಡಿರುವ ರಸ್ತೆಗಳ ಉದ್ದ (ಜಿಲ್ಲಾವಾರು)

ಕ್ರ.ಸಂ.	ಜಿಲ್ಲೆಗಳು	ಹೊಸದಾಗಿ ಸೇರಿರುವ	ಒಟ್ಟು ರಸ್ತೆ ಉದ್ದ ಕಿ.ಮೀ.	1997-98ನೇ ಸಾಲಿನಲ್ಲಿ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳಿಗೆ ನೀಡಿರುವ ಅನುದಾನ (ಲಕ್ಷರೂ.ಗಳಲ್ಲಿ)
1.	ಬೆಂಗಳೂರು (ನಗರ)	-	1924	98.93
2.	ಬೆಂಗಳೂರು (ಗ್ರಾಮಾಂತರ)	28	2964	161.96
3.	ತುಮಕೂರು	3	4406	247.21
4.	ಕೋಲಾರ	107	3910	252.16
5.	ಮೈಸೂರು	-	4738	352.62
6.	ಮಂಡ್ಯ	-	5777	498.68
7.	ಶಿವಮೊಗ್ಗ	1	3881	226.73
8.	ಚಿತ್ರದುರ್ಗ	-	3513	207.12
9.	ಹಾಸನ	7	4079	215.18
10.	ಚಿಕ್ಕಮಗಳೂರು	82	4069	178.59

11.	ದಕ್ಷಿಣ ಕನ್ನಡ	205	2504	181.20
12.	ಕೊಡಗು	12	1643	103.80
13.	ಧಾರವಾಡ	196	6100	303.12
14.	ಉತ್ತರ ಕನ್ನಡ	-	3671	233.80
15.	ಬೆಳಗಾಂ	135	3393	153.74
16.	ಬಿಜಾಪುರ	21	3735	234.12
17.	ಬಳ್ಳಾರಿ	193	2000	145.45
18.	ರಾಯಚೂರು	-	2766	190.17
19.	ಗುಲ್ಬರ್ಗಾ	-	3435	203.12
20.	ಬೀದರ್	1	1707	84.39
	ಒಟ್ಟು	986	71.115	4268.09

(ಓಡಿಲಿರ್, ವಿಆರ್ ಟಿಡಿಬಿ ರಸ್ತೆಗಳು ಸೇರಿರುತ್ತದೆ)

ಲೋಕ್ ಅದಾಲತ್

197 (525) ಶ್ರೀ ಎಸ್. ಪಿ ಮುದ್ದ ಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಲೋಕ್ ಅದಾಲತ್ ಕಾರ್ಯಕ್ರಮದಡಿಯಲ್ಲಿ ಇದುವರೆಗೆ ತೀರ್ಮಾನವಾಗಿರುವ ಮೊಕದ್ದಮೆಗಳೆಷ್ಟು?

ಆ) ಈ ದಿಸೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ. ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 97,357 ಮೊಕದ್ದಮೆಗಳು

ಆ) 1986 ರಿಂದಲೂ ಲೋಕ್ ಅದಾಲತ್ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಈ ಹಿಂದೆ ಕರ್ನಾಟಕ ರಾಜ್ಯ ಕಾನೂನು ನೆರವು ಮಂಡಳಿ ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈಗ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ದಿ: 19-4-1997 ರಂದು ಅಸ್ತಿತ್ವಕ್ಕೆ ಬಂದಿದ್ದು, ಈ ಪ್ರಾಧಿಕಾರವೂಸಹ ಲೋಕ್ ಅದಾಲತ್ ಶಿಬಿರದ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ಕೊಟ್ಟು, ಪ್ರಕರಣಗಳನ್ನು ರಾಜಿ ಮುಖಾಂತರ ಇತ್ಯರ್ಥಪಡಿಸುವ ಮೂಲಕ ಜನ ಸಾಮಾನ್ಯರಿಗೆ ಅನುಕೂಲ ಒದಗಿಸಿದೆ ಹಾಗೂ ನ್ಯಾಯಾಲಯಗಳಲ್ಲಿ ಸುಸ್ತಿಯಲ್ಲಿರುವ ಪ್ರಕರಣಗಳ ಹೊರೆಯನ್ನು ಕಡಿಮೆ ಗೊಳಿಸುತ್ತಿದ್ದು, ಶೀಘ್ರ ವಿಲೇವಾರಿಗಾಗಿ ಶ್ರಮಿಸುತ್ತಿದೆ.